ಪ್ರಧಾನ ದಿವಾಣಿ ನ್ಯಾಯಾಧೀಶರು ಹಾಗೂ ಜೆಎಮ್‌ಎಪ್‌ಸಿ ನ್ಯಾಯಾಲಯ, ಹುಬ್ಬಳ್ಳಿ
ಸಿ ಸಿ ನಂ.226/2012

| | | | | | |
|---|---|---|---|---|---|
| ಸಾಕ್ಷಿದಾರರ ಹೆಸರು | : | ಬಸಪ್ಪ ಜ್ಞಾನಮೋಟೆ | ಪಿಡಬ್ಲೂ | : | 20 |
| ತಂದೆಯ ಹೆಸರು | : | ಪುಂಡಲೀಕಪ್ಪ | ಸಿಡಬ್ಲೂ | : | 44 |
| ವಯಸ್ಸು | : | 70 ವರ್ಷ | | | |
| ಉದ್ಯೋಗ | : | ನಿವೃತ್ತ ಸರ್ಕಾರಿ ನೌಕರ | | | |
| ವಾಸ ಸ್ಥಳ | : | ವಿನಾಯಕ ನಗರ ಧಾರವಾಡ | | | |

ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣಿಕರಿಸಿದ ದಿನಾಂಕಃ 06/06/2019
ಮುಖ್ಯ ವಿಚಾರಣೆ ಎಪಿಪಿ ಯವರಿಂದ :

ನಾನು 1996 ನೇ ಇಸ್ವಿಯಿಂದ ಇಲ್ಲಿಯವರೆಗೂ ನಾನು ಧಾರವಾಡದ ವಿನಾಯಕ ನಗರದಲ್ಲಿ ವಾಸ ಇರುತ್ತೇನೆ. 2000 ನೇ ಇಸ್ವೀಯಲ್ಲಿ ವಿನಾಯಕ ನಗರದ ರಸ್ತೆಯ ಸ್ಥಿತಿ ಸಾಧಾರಣವಾಗಿತ್ತು. ಸದರಿ ರಸ್ತೆಯ ಕೆಲಸವನ್ನು ಯಾರು ಯಾವ ರೀತಿ ಮಾಡಿಸಿದ್ದರು ಎಂಬುವುದು ನನಗೆ ಗೊತ್ತಿಲ್ಲ. ಯಾರು ಯಾವ ವಿಚಾರದಲ್ಲಿ ದೂರನ್ನು ಕೊಟ್ಟಿರುತ್ತಾರೆ ಎಂಬುವುದು ನನಗೆ ಗೊತ್ತಿಲ್ಲ. ಯಾವುದೇ ಕಾಮಗಾರಿಯ ಬಗ್ಗೆ ಹಣ ದುರುಪಯೋಗವಾದ ಬಗ್ಗೆ ನನಗೆ ಗೊತ್ತಿಲ್ಲ. ಪೊಲೀಸರು ನನ್ನ ಹೇಳಿಕೆಯನ್ನು ತೆಗೆದುಕೊಂಡಿದ್ದಾರ ಅಥವಾ ಇಲ್ಲ ಎಂಬುವುದು ನನಗೆ ನೆನಪಿಲ್ಲ.

(ಸದರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಅಂತಾ ಪರಿಗಣಿಸಿ ಪಾಟೀ ಸವಾಲು ಮಾಡಲು ಸಸಅ ಅವರು ಅನುಮತಿ ಕೋರಿರುತ್ತಾರೆ. ಅನುಮತಿಯನ್ನು ನೀಡಲಾಯಿತು)

ಪಾಟೀ ಸವಾಲು ಎಪಿಪಿ ಯವರಿಂದ :

ದಿ.01.09.2000 ಪ್ರಜಾವಾಣಿ ದಿನಪತ್ರಿಕೆಯನ್ನು ಓದಿದಾಗ ಆರೋಪಿತರು ನಮ್ಮ ಬಡಾವಣೆಯಲ್ಲಿ ಇರುವ ಸಾರ್ವಜನಿಕ ರಸ್ತೆ ರಿಪೇರಿ ಹಾಗೂ ವಗೈರೆ ಕೆಲಸದ ಬಗ್ಗೆ ಸುಮಾರು 22 ಲಕ್ಷ ರೂಪಾಯಿ ಹಣವನ್ನು ದುರುಪಯೋಗ ಮಾಡಿದ್ದು ಗೊತ್ತಾಯಿತು ಎಂದರೆ ಸರಿಯಲ್ಲ. ಈ ಕುರಿತು ಪೊಲೀಸರು ನನ್ನನ್ನು ದಿ.17.10.2000 ರಂದು ವಿಚಾರಿಸಿ ಹೇಳಿಕೆ ತೆಗೆದುಕೊಂಡಿದ್ದಾರೆ ಎಂದರೆ ಸರಿಯಲ್ಲ. ಸದರಿ ಈಗ ಓದಿ ಹೇಳಿದ ಹೇಳಿಕೆಯನ್ನು ನಿಪಿ.16 ಎಂದು ಗುರುತಿಸಲಾಯಿತು. ಆ ರೀತಿ ಹೇಳಿಕೆ ನೀಡಿದ್ದರೂ

ಸಹ ಆರೋಪಿಗಳಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲು ಃ ಆರೋಪಿಗಳ ಪರ ವಕೀಲರಿಂದಃ

ಪಾಟೀ ಸವಾಲು ಇಲ್ಲವೆಂದು ತಿಳಿಸಿರುತ್ತಾರೆ.

ಮರು ವಿಚಾರಣೆ ಃ ಇಲ್ಲ

(ನನ್ನ ಹೇಳಿಕೆ ಪ್ರಕಾರ ಬೆರಳಚ್ಚುಗಾರರಿಂದ ತೆರೆದ ನ್ಯಾಯಾಲಯದಲ್ಲಿ ಕಂಪ್ಯೂಟರದಲ್ಲಿ ಮುದ್ರಿಸಲಾಯಿತು)

ಓ ಹೇ ಕೆ ಸರಿ ಇದೆ,

ಪ್ರಧಾನ ದಿವಾಣಿ ನ್ಯಾಯಾಧೀಶರು
ಹಾಗೂ ಜೆ ಎಮ್ ಎಫ್ , ಹುಬ್ಬಳ್ಳಿ.